560

ಮೈಸೂರ ಮಿಸ್ಸ್‌ಕ್ಕು.

ಪ್ರ ಕ ಟ ನೆ.

ತಾರೀಖು 6ನೇ ಮೇ 1896.

ಮೈಸೂರು ಮಿಸ್ಸ್‌ಕ್ಕಿನಲ್ಲಿ ಇದರಿಯಲ್ಲಿ ಕಂಡ ಹೋಬಳಿಗಳಲ್ಲಿ ಸಂದಲ್ ಮರಗಳನ್ನು ಬೇರು ಸಮೇತವಾಗಿ ಕೀಳಿಸಿ ವೊರಟು ಕೆತ್ತನೆ ಮಾಡಿ ಆಯಾ ಹೋಬಳಿಗಳಿಗೆ ಬಾಜಾದಲ್ಲಿ ತೋರಿಸಿರುವ ಕೋಣಗಳಿಗೆ 1896ನೇ ಇಸವಿ ಆಕ್ಟೋಬರ್ ಆಖೈರ್ ವಳಗಾಗಿ ಸಾಗಿಸುವದಕ್ಕೋಸ್ಕರ ದರಖಾಸ್ತುಗಳನ್ನು ಮೈಸೂರ ಮಿಸ್ಸ್‌ಕ್ಕು ಫಾರೆಸ್ಟ್ ಆಫಿಸರವರು 1896ನೇ ಇಸವಿ ಜೂನ್ ತಾರೀಖು 15ರ ವರಿಗೆ ತೆಗದುಕೊಳ್ಳುತ್ತಾರೆ.

ತಾಲ್ಲೂಕು.	ಹೋಬಳಿ.	ಕೋಣ.	ಪೊತ್ತ.
ಹುಣಸೂರು ..	ಬೆಟ್ಟದಪುರ ..	ಹುಣಸೂರ .	50 ಟನ್
ಹೆಗ್ಗಡದೇವನಕೋಟೆ ..	ಚಿನ್ನಹಳ್ಳಿ ..	ಡಿಟೋ .	50 ಟನ್
ಗುಂಡ್ಲು ..	ರಾಘವಾಪುರ ..	ಶ್ರೀರಂಗಪಟ್ಟಣ ..	25 ಟನ್
ಚಾಮರಾಜನಗರ .	ಸಂತೆಮರಹಳ್ಳಿ ..	ಡಿಟೋ ..	25 ಟನ್
ಮೈಸೂರು ..	ಸಿಂದವಳ್ಳಿ ..	ಡಿಟೋ ..	25 ಟನ್

2. ತಮಾಂ ದರಖಾಸ್ತುಗಳೂ "ಫಲಾನಾ ಕೋಣಿಗೆ ಫಲಾನಾ ಹೋಬಳಿಯಿಂದ ಸಂದಲ್ ಮರಗಳನ್ನ ಕೀಳಿಸಿ ವೊರಟು ಕೆತ್ತನೆಯಿಂದ ಸಾಗಿಸಲು ದರಖಾಸ್ತು," ಯಂಬದಾಗಿ ಮೇಲ್ ವಿಳಾಸ ಬರಮ ಮೊಹರ್ ಮಾಡಿ ರಿಜಿಸ್ಟರ್ ಘೂಲಕ್ ರವಾನಿಸಬೇಕು. ದರಖಾಸ್ತು ಜೊತೆಯಲ್ಲಿ ದರಖಾಸ್ತು ಮಾಡಲ್ಪಡುವ ಹುಣಸೂರು ಮತ್ತು ಹೆಗ್ಗಡದೇವನಕೋಟೆ ಪ್ರತಿ ಬಂದು ಹೋಲಿಗೂ 100 ರೂಪಾಯಿ ಮತ್ತು ಇತರ ತಾಲ್ಲೂಕು ಪ್ರತಿ ಬಂದು ಹೋಬಳಿಗೂ 50 ರೂಪಾಯಿ ಬೆಲೆಯುಳ್ಳ ಕರೆನ್ಸೀ ನೋಟುಗಳಿ ಯಾ ಪ್ರೊನೋಟಾಪ್ಟಿ ರವಾನಿಸಬೇಕು. ದರಖಾಸ್ತುಗಳು 1896ನೇ ಇಸವಿ ಜೂನ್ 16ನೇ ತಾರೀಖಿನಲ್ಲಿ ಹಾಜರು ಇರತಕ್ಕ ದರಖಾಸ್ತುದಾರ್ರ ಯದುರಿಗೆ ಮಿಸ್ಸ್‌ಕ್ಕು ಫಾರೆಸ್ಟ್ ಆಫಿಸರವರಿಂದ ವಡೆಯಲ್ಪಟ್ಟು ಕರೆನ್ಸೀ ನೋಟುಗಳು ವಾಪಸು ಮಾಡಲ್ಪಡುವವು.

3. ಪ್ರತಿ ದರಖಾಸ್ತಿನಲ್ಲಿಯೂ ಮರಗಳನ್ನ ಕೀಳಿಸಿ ವೊರಟು ಕೆತ್ತನೆ ಮಾಡಿಸುವದಕ್ಕೆ ಸರಮುರಕ್ಕೆ ಮತ್ತು ತಲೆ ಕೊನೆಗಳಿಗೆ ಪ್ರತ್ಯೇಕವಾಗಿ ದರ ಟನ್ ಬಂದಕ್ಕೆ ಇಷ್ಟೆಂದು ದರ ನಮೂದಿಸಬೇಕು. ಮತ್ತು ಕೋಣಿಗೆ ರವಾನೆಗೆ ದರ ಟನ್ ವಂದಕ್ಕೆ ಜಂಗಲ್ ಮೈಲಿ ವಂದಕ್ಕೆ ಇಷ್ಟುದರ ವೆಂಕಲೂ ಮತ್ತು ಹೈ ರೋಡು ಮೈಲಿ ವಂದಕ್ಕೆ ಯಿಷ್ಟು ದರ ವೆಂತಲೂ ಪ್ರತ್ಯೇಕವಾಗಿ ನಮೂದಿಸಬೇಕು.

4. ಯಾವ್ದೂ ಮರಗಳೂ ತಾಯಿಬೇರು ತಾಲುಬೇರು ಮತ್ತು ಪಕ್ಕದ ಬೇರುಗಳ ವೊಂದಿಗೆ ಕೀಳಿಸಲ್ಪಡಬೇಕು. ಜಮೀನಿನಲ್ಲಿ ಜೇಗು ಇರತಕ್ಕ ಮರಗಳು ಯಾವದೂ ಕೆಡಲ್ಪಡಕೂಡದು. ಮರಗಳ ರಂಬೆಗಳು ಕೊಡ್ಲಿಯಿಂದ ಕತ್ತರಿಸಲ್ಪಡಕೂಡದು. ಗರಗಸದಿಂದ ಕೊಯ್ಯಲ್ಪಡಬೇಕು. ಬೇರಿನಲ್ಲಿ ಇರತಕ್ಕ ಮಂಣು ಮತ್ತು ಕಲ್ಲು ಜನ್ನಾಗಿ ತೆಗಿಯಲ್ಪಡಬೇಕು. ಮರಗಳ ಕಿಪ್ಪೆ ಮತ್ತು ಬಿಳೇ ಚಕ್ಕೆಯನ್ನು ಒಪಳ ಹುಷಾರಿನಿಂದ ವೊದಲು ಮಚ್ಚುಕತ್ತಿಯಿಂದ ಕೆತ್ತಿ ನಂತರ ವೈಳಗಿನ ಜೇಗು ಪೋಲಾಗದಂತೆ ಬಾಚಿಯಿಂದ ಕೆತ್ತಬೇಕು. ಮರದ ಜೇಗಿನ ಮೇಲೆ ಯಾವ ಸಂದರ್ಭದಲ್ಲೂ ಕಾಲಂಗುಲ ದಪ್ಪಕ್ಕಿಂತ ಜಾಸ್ತಿಯಾಗಿ ಬಿಳೇ ಮರ ಬಿಡಕೂಡದು. ಒಳಕಣಿ ಮತ್ತು ಜೇಗು ಇರತಕ್ಕ ಚಕ್ಕೆ ಮರಗಳಜೊತೆಲೇ ಸಾಗಿಸಲ್ಪಡಬೇಕು.

5. ಬಂದು ಅಂಗುಲಕ್ಕಿಂತ ಜಾಸ್ತಿಯಾಗಿ ಜೇಗುವುಳ್ಳ ಕಿಪ್ಪೆ ತಲೆಗಳು ಜಂಗಲ್‌ಗಳಲ್ಲಿ ಬಿಡಕೂಡದು. ವೊರಟು ಕೆತ್ತನೆ ಮಾಡದೆ ಹಾಗೆಯೇ ಕೋಣಿಗೆ ರವಾನಿಸಬೇಕು. ಅಂಥಾ ತಲೆ ಕೊನೆಗಳಿಗೆ ರವಾನೆ ಚಾರ್ಜ್ ಮಾತ್ರ ಪಾವತಿ ಮಾಡಲ್ಪಡುತ್ತೆ.

6. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಮಿಸ್ಸ್‌ಕ್ಕು ಫಾರೆಸ್ಟ್ ಆಫಿಸರವರು ಪ್ರತಿ ಮಾಹೆಯಲ್ಲೂ ಯಷ್ಟು ಮೊತ್ತದಾ ರಿಯಿಂದ ಸಾಗಿಸಲ್ಪಡಬೇಕೆಂದು ವಿಧಾಯಕ ಮಾಡುತ್ತಾರೋ ಅಷ್ಟು ಮೊತ್ತವನ್ನ ಖಂಡಿತವಾಗಿ ಕೋಣಗಳಿಗೆ ತಯಾರಿಯಿಂದ ರವಾನಿಸಬೇಕು. ಇದಕ್ಕೆ ತಪ್ಪಿದಲ್ಲಿ ಮಿಸ್ಸ್‌ಕ್ಕು ಫಾರೆಸ್ಟ್ ಆಫಿಸರವರಿಂದ ಮೊಕರರ್ಮಾಡಲ್ಪಡುವ ಪೆನಾಲ್ಟಿಗೂ ಪಾತ್ರಗತಕ್ಕದ್ದು.

7. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ [illegible] ತಾನು ಬರದುಕೊಡುವ ಕರಾರು ಮೇರಿಗೆ ಕ್ರಯವಾಗಿ ಸಡೆದುಕೊಳ್ಳುವ ಒಕ್ಕೆ ಜಾಮೀನ್ ತರೀಕ್ ಹುಣಸೂರು ಮತ್ತು [illegible] ನಕೋಟೆ ತಾಲ್ಲೂಕು ಪ್ರತಿ ಬಂದು ಹೋಬಳಿಗೆ 200 ರೂಪಾಯಿನ ಡಿಪಾಜಿಟ್ ಮತ್ತು ಇತರ ತಾಲ್ಲೂಕುಗಳ ಪ್ರತಿ ಬಂದು ಹೋಬಳಿಗೆ 100 ರೂಪಾಯಿನ ಡಿಪಾಜಿಟ್ ಕಟ್ಟಬೇಕು. ಮೇಲ್ಕಂಡ ಪರತ್ತುಗಳ ಮೇರೆ ನಡಿಯಲೂ ತಪ್ಪಿದಲ್ಲಿ ಕೇವಣೀ ವೊಬಲಗು ಸರಕಾರಕ್ಕೆ ಕೇರಿಕೊಳ್ಳಲ್ಪಡುತ್ತೆ.

8. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

9. ಸಂದಲ್ ಮರಗಳ ಜುವಾಮಿಸೋಣ, ಕೀಳುವಿಕೆ ವೊರಟು ಕೆತ್ತನೆ ಮತ್ತು ಅದೇವಿಷಯಗಳಲ್ಲಿ ಮಿಸ್ಸ್‌ಕ್ಕು ಫಾರೆಸ್ಟ್‌ಆಫಿಸರವರು ಮಾಡುವ ರೂಲ್ಸ್ ಮತ್ತು ಕಾನೂನುಗಳಿಗೆ ಕಂಟ್ರಾಕ್ಟುದಾರನು ಖಂಡಿತವಾಗಿ ಬದ್ಧವಾಗಿ ಇರತಕ್ಕದ್ದು.

10. ಮಿಸ್ಸ್‌ಕ್ಕು ಫಾರೆಸ್ಟ್ ಆಫಿಸರವರು ತಮ್ಮ ದರದ ಅಥವಾ ಇತರ ಯಾವ ದರಖಾಸ್ತುಗಳನ್ನು ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ ಮತ್ತು ಅಂಥಾ ಅಂಗೀಕಾರವು ಫಾರೆಸ್ಟ್ ಕಾನ್‌ಸರ್‌ವೇಟರ್ ಸಾಹೆಬರವರ ಮಂಜೂರಾತಿಗೆ ವಳಪಟ್ಟು ಇರುತ್ತೆ.

11. ಪ್ರವೇಶಿಸುವ ಕಂಟ್ರಾಕ್ಟುದಾರನು ಅಪೇಕ್ಷಿಸುವ ಇತರ ಜಾಸ್ತೀ ಸಂಗತಿಗಳನ್ನು ಮೈಸೂರ ಮಿಸ್ಸ್‌ಕ್ಕು ಫಾರೆಸ್ಟ್‌ಆಫಿಸರವರಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

ಟಿ. ಅಮ್ಮುಕ್ಕಾಮ್,
ಮಿಸ್ಸ್‌ಕ್ಕು ಫಾರೆಸ್ಟ್ ಆಫಿಸರ್.

ತಾರೀಖು ೬ನೇ ಮೇ 1896.

ಇದರಿಂದ ಸರ್ವಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ಮೈಸೂರ ಮಿಸ್ಟ್ರಿಕ್ಟಿಗೆ ಕೇರಿದ ಇದರಲಿ ಕಂಡ ತಾಲ್ಲೂಕುಗಳ ಮಿಸ್ಟ್ರಿಕ್ಟ ಫಾರೆಸ್ಟುಗಳಲ್ಲಿಯೂ ಹಿಡುವಳಿಯಲ್ಲಿ ಅಲ್ಲದ ಆಕಾರ ಕಂಡ ಜಮೀನುಗಳು ಆಡಿಗಿರುವ ಸರ್ಕಾರಿ ಎಂಬರ್ ಜಮೀನುಗಳಲ್ಲಿಯೂ, ಅಮೃತಹುಹಲ್ ಕಾವಲುಗಳಲ್ಲಿಯೂ, ಹಳೆ ಮತ್ತು ಹೊಸ ಡಿಮಾರ್ಕೇಷನ್ ಲೈನುಗಳ ಮಧ್ಯೆ ಇರುವ ಮಿಸ್ಟ್ರಿಕ್ಟ ಫಾರೆಸ್ಟುಗಳಲ್ಲಿಯೂ, ಗ್ರಾಮ ಬೇಲಿಗಳ ಆಮರಾಯಿ, ಮತ್ತು ಅಮರಾಯಿ ಬೇಲಿಗಳಲ್ಲಿ ಬೆಳೆಯುವ ಬಸಾರೆ ಹುಟ್ಟುವಳಿಗಳನ್ನು 1896ನೇ ಇಸವಿ ಜುಲೈ ತಾಹೆ 1ನೇ ತಾರೀಖು ಲಾಗಾಯತು 1897ನೇ ಇಸವಿ ಜೂನ್ 30ನೇ ತಾರೀಖಿನ ವರಿಗೆ ಜಮಾಯಿಸುವ ಹಕ್ಕುದಾರಿಯು ಬಹಿರಂಗವಾದ ಹರಾಜು ಮೂಲಕ ತಾಲ್ಲೂಕುವಾರಾಗಿಯಾಗಲಿ ಅಥವಾ ಹೋಬಳಿವಾರಾಗಿಯಾಗಲಿ ಸರಕಾರಕ್ಕೆ ಅನುಕೂಲವಾಗುವ ರೀತಿಯಲ್ಲಾಗಿ ಈ ಕೆಳಗೆ ವಿವರಿಸಿರುವ ಆಫಿಸರವರಿಂದ ಈ ಕೆಳಗೆ ಕಂಡ ತಾರೀಖುಗಳಲ್ಲಿ ವಿಕ್ರಯಿಸಲ್ಪಡುವದು.

ಸೂಚನೆ:—ಫಾರೆಸ್ಟ ಪ್ಲಾಂಟೇಷನ್ಗಳೂ, ಸಂದಲ್ ಮತ್ತು ಫಾರೆಸ್ಟ ರಿಪ್ರೊಡಕ್ಟಿವ್ ಬ್ಲಾಕುಗಳೂ, ಇದಕ್ಕೆ ಕೇರಿ ಇರುವದಿಲ್ಲ.

ತಾಲ್ಲೂಕಿನ ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಹರಾಜು ಮಾಡುವ ಆಫಿಸರವರು.
ಮೈಸೂರು ..	10 6 96	ಮೈಸೂರ ಮಿಸ್ಟ್ರಿಕ್ಟ ಆಫಿಸ ಟಿ. ..	ಡಿಪ್ಯೂಟಿ ಕಮ್ಮಿಷನರ್ ಸಾಹೆಬರವರು
ಯಡತೊರೆ ..	ಡಿಟೋ	ಡಿಟೋ ..	ಡಿಟೋ
ಹುಣಸೂರು ..	ಡಿಟೋ	ಡಿಟೋ ..	ಡಿಟೋ
ಹೆಗ್ಗಡದೇವನಕೋಟೆ ..	ಡಿಟೋ	ಡಿಟೋ ..	ಡಿಟೋ
ಗುಂಡ್ಲುಪೇಟೆ ..	ಡಿಟೋ	ಡಿಟೋ ..	ಡಿಟೋ
ಶ್ರೀರಾಮರಾಜನಗರ ..	ಡಿಟೋ	ಡಿಟೋ ..	ಡಿಟೋ
ನಂಜನಗೂಡು ..	ಡಿಟೋ	ಡಿಟೋ ..	ಡಿಟೋ
ತಿ ನರಸೀಪುರ ..	ಡಿಟೋ	ಡಿಟೋ ..	ಡಿಟೋ
ಮಂಡ್ಯ ..	13 6 96	ಫೈಂಬ್ರಾಕ್ಸ್‌ಸನ್ ಡಿವಿಜ್ ಆಫಿಸಲ್ಲಿ ..	ಫೈಂಬ್ರಾಕ್ಸ್ ಸನ್ ಡಿವಿಜ್ ಆಫಿಸರವರು
ಮಳವಳ್ಳಿ ..	ಡಿಟೋ	ಡಿಟೋ	ಓಟೋ
ಶ್ರೀರಂಗಪಟ್ಟಣ ..	ಡಿಟ್ಟೋ	ಡಿಟೋ ..	ಡಿಟೋ
ಕೃಷ್ಣ ರಾಜಪೇಟೆ ..	ಡಿಟೋ	ಡಿಟೋ ..	ಡಿಟೋ
ನಾಗಮಂಗಲ ..	ಡಿಟೋ	ಡಿಟೋ ..	ಡಿಟೋ

ಹುಟ್ಟುವಳಿ ತಪ್ಸೀಲ್.

1. 1 ತಾರೇಕಾಯಿ, 2 ಕಿಗೇಕಾಯಿ, 3 ಅರಿವಾಳದ ಕಾಯಿ, 4 ದಿಂಡಿಗದಗೋಂದು, 5 ಕಾಡುಅರ್ಜುನ, 6 ಜೇನುಮೇಣ, 7 ಜೇನುತುಪ್ಪ, 8 ಕವಿಲಾರಂಗು, 9 ಪತಂಗ, 10 ಮಡ್ಡಿ, 11 ಚೆಲ್ಲದ ಬೀಜ, 12 ಹಾಲುಮಡ್ಡಿ, 13 ಹಗಡೆಬೀಜ, 14 ಹೊಂಗೇ ಬೀಜ, 15 ಗೇರುಬೀಜ, 16 ಅವರಿಕೆಗೋಂದು, 17 ಸಾರಗದಕೊಂಬು, 18 ಗುಗ್ಗಳ, 19 ಅಳಲೇಕಾಯಿ, 20 ಕೇಲದಹಣ್ಣು, 21 ಅರಗು, (ಫೈಂಬ್ರಾಕ್ಸ್ ಸನ್ ಡಿವಿಜ್ ತಾಲ್ಲೂಕುಗಳದು ವಿನಹ) 22 ಕೀಕಾಫಲದ ಹಣ್ಣು, 23 ಕೆಂಪೆನಾರು.

2. ಜಹದರಖಾಸ್ತುದಾರನು ಹರಾಜು ಖೈದಾದ ಕೂಡಲೆ ಹರಾಜು ಮೊಬಲಗು ಪೈಕಿ ಕೇಕಡಾ 25ರಂತೆ ಆಗುವ ಮೊಬಲಗನ್ನು ಠೇವಣಿ ಕಟ್ಟುತಕ್ಕದ್ದು. ಹಾಗೆ ಮಾಡದೆ ಹೋದಲ್ಲಿ ಕೂಡ್ಲೆ ಬಾಬು ಎರಡನೇ ದಫ ಹರಾಜು ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.

3. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು 1896ನೇ ಜುಲೈ ತಾರೀಖು 1ರಲ್ಲಿ ಬಾಬು ರೂಢಿಸಿಕೊಳ್ಳಲು ಪ್ರವೇಸಪತಕ್ಕ ವತ್ತು ಕಟ್ಟಾಕ್ಕು ಮೊಬಲಗ ಪೈಕಿ ಉಳಿದ ಮೊಬಲಗನ್ನೂ ಮತ್ತು ಕಂಟ್ರಾಕ್ಟು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಒಂದಾಣೆಯಂತೆ ಆಗುವ ಲೋಕಲ್ ಸೆಸ್ ಮೊಬಲಗನ್ನೂ ಸಹ ಮೂರು ಸಮಾನವಾದ ವಿಸ್ತುಗಳಲ್ಲಿ ಅಂದರೆ—

1896ನೇ ಡಿಸೆಂಬರ್ 1ನೇ ತಾರೀಖು.

1897ನೇ ಜನವರಿ 1ನೇ ತಾರೀಖು.

1897ನೇ ಫಿಬ್ರವರಿ 1ನೇ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು. ಕ್ರಿಪ್ತವಾದ ತಾರೀಖುಗಳಲ್ಲಿ ಖಿಸ್ತುಗಳನ್ನು ಪಾವತಿ ಮಾಡದೆ ಇದ್ದಲ್ಲಿ ಕೇಡಾ ನಾಲಿಯಾನಾ 6 ರೂಪಾಯಿ ಮೇರೆ ಬಡ್ಡಿ ಕಟ್ಟಲ್ಪಡುತ್ತೆ. ಮತ್ತು ವೊಬಲಗನ್ನು ಆವನ ಆಸ್ತಿಯಿಂದ ವಿೀ ವಾಡಿಕೊಳ್ಳುತ್ತೆ.

4. ಕಂಟ್ರಾಕ್ಟುದಾರನು ಯಾವ ಬಂದು ಖಿಸ್ತನ್ನು ಪಾವತಿಮಾಡದೆ ತಪ್ಪಿದರೂ, ಆಥವಾ ಪಾವತಿ ಮಾಡಲು ಸಾವಕಾಶ ಮಾಡಿದರೂ 1897ನೇ ಜೂ ಆಖೈರುವರಿಗೆ ಉಳಿದಿರುವ ಕಾಲದಲ್ಲಿ ಬಾಬು ಜಮೂಸಿಸುವದಕ್ಕೂ ಹರಾಜು ಮಾಡಲ್ಪಡುವದು; ಅಥವಾ ಅಮಾನಿಯಲ್ಲಿ ರೂಢಿಸಲ್ಪಡುವದು. ಪರಂತು ತಪ್ಪಿಹೋದ ಕಂಟ್ರಾಕ್ಟುದಾರನು ಅದರಿಂದ ಉಂಟಾಗುವ ನಷ್ಟಕ್ಕೆ ಗುರಿಮಾಡ ಲ್ಪಡುವನು.

5. ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ಬೆಳೆಯುವ ಫಸಲನ್ನು ರೂಢಿಸಲು ಹಕ್ಕು ಇರುವದಿಲ್ಲ.

6. ಇನಾಂದಾರರ ನ್ಥಿರವಟ್ಟು ಹಕ್ಕುದಾರಿ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಲ್ಲ.

7. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಇಜಾರೆಯಲ್ಲಿ ಅಡಗಿರುವದಿಲ್ಲ.

ಬಿ. ಕೆ. ವೆಂಕಟವರದಯ್ಯಂಗಾರ್,
ಡೆಪ್ಯೂಟಿ ಕಮ್ಮಿಷನರ್.

ಹಾಸನ ಡಿಸ್ಟ್ರಿಕ್ಟು.

ಇ ಸ್ತಿ ಹಾ ರ್ ನಾ ಮೆ.

ತಾರೀಖು 30ನೇ ಏಪ್ರಿಲ್ 1896.

ನಂ. 1. ಸಕಲಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನೆಂದರೆ, (ಇದರಡಿ ಕಂಡ ತಖ್ತೆದುಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೊಸ್ಕರ ಕ್ರಮ ಪ್ರಕಾರ ಜಪ್ತಿ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಶುರುವಾಗಿ ಉಳಿಕೆಯಾವದೂ ಇಲ್ಲದೆ ಗ್ರಾಮವು ಜಾಡದರಖಾಸ್ತುದಾರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ [illegible] ಳ್ಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಾಖ್ತ್ಯಾರ್ದೀ ವೇರೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ [illegible] ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರರು ಹರಾಜು ಕಾಲದಲ್ಲಿ ಕ್ರಯದ ಮೊಬಲಗ ಪೈಕಿ ಕೇಡಾ [illegible]ಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ ಪೈಕಿ ಬಾಕಿಯನ್ನು ಹರಾಜು ತಾರೀಖು ಲಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಆಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ಪ ನುಕ್ಸಾನಾಗಿ ಮರಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ದು ಮುಖ್ತಾರೀಕರ ತರೇ ಕ್ ದರಖಾಸ್ತು ಮಾಡುತ್ತಾರೆಯೋ ಎಂಬುದನ್ನು ನಮೂದಿಸತಕ್ಕದ್ದು. ಮುಖ್ತಾರೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜುಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರ ಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪೂರತಿಯಾಗಿರುತ್ತೆಂಬ ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮುಕ್ತಾಯ ಮಾಡಲ್ಪಡತಕ್ಕದ್ದು.

7. ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವೆ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿಪಡಿಸಿ, ಹರಾಜನ್ನು ಡೆಪ್ಯೂಟಿ ಕಮ್ಮಿಷನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಧರ್ದೆ ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರಿ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರಿ ಮಾಡೋಣಾದ ಒಂದು ಸರ್ಟಿಫಿಕೇಟು ಆತನಿಗೆ ಕೊಡಲ್ಪಡುವದು. ತಪಸೀಲ್ನಲ್ಲಾಗಲಿ ಅಂದಾಜಿ ಖೀಜವರ್ದೀ ವಿಷಯದಲ್ಲಾಗಲಿ ಇವುವ ಗಲ್ಲತ್ತುಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯುತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನು ಪಟ್ಟಂತೆ ಎಣಿಸುವ ಜನಗಳು ಹರಾಜು ಆದಿಂದ ವಿಧಾಯಕವಾದ ದಿನಗಳೊಳಗಾಗಿ ಡೆಪ್ಯೂಟಿಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ವಳಪಟ್ಟು ಇರುತ್ತೆ.